SRI S. M. KRISHNA :— The Hon Members have conceded this is a very useful Bill, and they want a financial memorandum. We will examine it and again bring it.

PERSONAL EXPLANATIONS

(i) *by Sri M. S. Krishnan regarding participation of the vice Chancellor in a club inaugural function.*

*ಶ್ರೀ ಎಂ. ಎಸ್. ಕೃಷ್ಣ (ಮಲ್ಲೇಶ್ವರಂ) :— ಮಾನ್ಯ ಸಭಾಧ್ಯಕ್ಷಣೀ ಯವರೇ, ಮೊನ್ನೆ ಶನಿವಾರದ ದಿವಸ ನಾನು ಡಿಮ್ಯಾಂಡ್ಸ್ ಬಗ್ಗೆ ಮಾತನಾಡು ವಾಗ, ಅದರಲ್ಲೂ ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುತ್ತಾ, ಒಂದು ರಿಕ್ರಿಯೇಷನ್ ಕ್ಲಬ್‌ಗೆ ಮಾನ್ಯ ಡಾ ಹೆಚ್. ನರಸಿಂಹಯ್ಯನವರು ಮತ್ತು ಐ.ಜಿ.ಪಿ. ಯವರು ಒಂದು ಫಂಕ್ಷನ್‌ಗೆ ಹೋಗಿದ್ದರು ಎಂದು ಹೇಳಿದೆ, ಆದರೆ ನಾನು ಅವರನ್ನು ಅವಮಾನ ಮಾಡಬೇಕು ಎನ್ನುತಕ್ಕಂಥ ದೃಷ್ಟಿಯಿಂದ ಹೇಳಲಿಲ್ಲ. ಅಲ್ಲಿಗೆ ಮಾನ್ಯ ಡಾ ಹೆಚ್ ನರಸಿಂಹಯ್ಯನವರು ಮತ್ತು ಐ.ಜಿ.ಪಿ. ಯವರು ಹೋಗೇ ಇರಲಿಲ್ಲ ವೆಂದು ಹೇಳಿದರು. ಡಾ. ಹೆಚ್. ನರಸಿಂಹಯ್ಯನವರು ಬಹಳ ಒಳ್ಳೆಯ ವ್ಯಕ್ತಿ ಗಳು, ಅವರ ವಿಷಯದಲ್ಲಿ ನನಗೆ ಒಳ್ಳೆಯ ಅಭಿಪ್ರಾಯವಿದೆ ಅವರಿಗೆ ಅವ ಮಾನ ಮಾಡಬೇಕು ಎನ್ನುತಕ್ಕಂಥ ದೃಷ್ಟಿಯಿಂದ ಹೇಳಿಲ್ಲ, ನಾನು ಹೇಳಿರತಕ್ಕಂಥ ದರಲ್ಲಿ ಏನಾದರೂ ತಪ್ಪು ಅರ್ಥ ಬರುವ ಹಾಗಿದ್ದಲ್ಲಿ ಅದನ್ನು ಕರೆಕ್ಟ್ ಮಾಡ ಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಹೆಸರು ಮಾತ್ರ ಆ ಒಂದು ಇನ್‌ವಿಟೇಷನ್‌ನಲ್ಲಿ ಇತ್ತೇ ವಿನಹ ಅವರು ಹೋಗಿರಲಿಲ್ಲ ವೆಂದು ಹೇಳಿದ್ದಾರೆ. ನಾನು ಅವರಿಗೆ ಅಗೌರವ ತರಬೇಕು ಎನ್ನತಕ್ಕಂಥ ದೃಷ್ಟಿ ಯಿಂದ ಹೇಳಿರಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ii) *re* : by Sri K. H. Patil regarding the charge of Sri Bangarappa made the previous day.

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).— ಮಾನ್ಯ ಸಭಾಪತಿಗಳೇ, ನಾನು ಒಂದು ಪರ್ಸನಲ್ ಎಕ್ಸ್‌ಪ್ಲನೇಷನ್ ನಲುವಾಗಿ ತಮ್ಮ ಅವಗಾಹನೆಗೆ ತರಲಿಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ದಿನಾಂಕ 22-3-1975ನೇ ದಿವಸ ಸಾಮಾನ್ಯ ಆಡ ಳಿತದ ವಿಷಯದಲ್ಲಿ ಮೂತನಾಡುವಾಗ ಮಾನ್ಯ ಸದಸ್ಯರಾದ ಶ್ರೀಮಾನ್ ಬಂಗಾ ರಪ್ಪನವರು ಒಂದು ಸ್ಟೇಟ್‌ಮೆಂಟನ್ನು ಮಾಡುತ್ತಾ ನನ್ನ ವಿಷಯದಲ್ಲಿಯೂ ಸಹ ಒಂದು ಮಾತನ್ನು ಹೇಳಿದ್ದಾರೆ. ಅವರು ಹೇಳಿದಂಥ ಮಾತು ತಮಗೂ ನನಗೂ ಅನ್ವಯಿಸುವಂಥ ರೀತಿಯಲ್ಲಿ ಮಾತನಾಡಿದ್ದಾರೆ. ಇದನ್ನು ನಾವು ವಿಚಾರ